## ಕರ್ನಾಟಕ ಸರ್ಕಾರ

## ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಉತ್ತರ ಕನ್ನಡ, ಕಾರವಾರ ರವರ ಕಾರ್ಯಾಲಯ

ಕಛೇರಿ ದೂರವಾಣಿ ಸಂಖ್ಯೆ( 08382-226514) 226514 (email:ddswo.karwar@gmail.com)

ಸಂಖ್ಯೆ:ಉನಿಸಕಇಕಾ:ಸಿಬ್ಬಂದಿ:ಸಿಆರ್-44:2016-17 ದಿನಾಂಕ:16-06-2017

### ತಿಳುವಳಿಕೆ ಪತ್ರ

ಉತ್ತರ ಕನ್ನಡ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಅಡುಗೆ ಸಹಾಯಕ ಹಾಗೂ ಕಾವಲುಗಾರ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಆಯ್ಕೆ ಮಾಡುವ ಕುರಿತು ಪರಿಶೀಲನಾ ಪಟ್ಟಿಯನ್ನು ಜಿಲ್ಲಾ ವೆಬ್‌ಸೈಟ್‌ನಲ್ಲಿ ಪ್ರಚಾರ ಪಡಿಸಲಾಗಿದೆ (www.uttarakannada.nic.in) ಹಾಗೂ Call Latter Download ಮಾಡಿಕೊಳ್ಳಲು Link ಒದಗಿಸಲಾಗಿದೆ. ಅಭ್ಯರ್ಥಿಗಳು Call Latter ನ್ನು Download ಮಾಡಿಕೊಂಡು ಪರಿಶೀಲನಾ ಪಟ್ಟಿಯಂತೆ ಈ ಕೆಳಕಂಡ ವೃಂದಗಳಿಗೆ ಈ ಕೆಳಗೆ ನಮೂದಿಸಿದ ದಿನಾಂಕದಂದು ಬೆಳಗ್ಗೆ 10:00 ಗಂಟೆಗೆ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜು ಕಾರವಾರ ಆವರಣದಲ್ಲಿ ಖುದ್ದಾಗಿ ಈ ಕೆಳಕಂಡ ಮೂಲ ದಾಖಲೆಗಳನ್ನು ಸಲ್ಲಿಸಲು ತಿಳಿಸಿದೆ. ಒಂದು ವೇಳೆ ನೀವು ಸದರಿ ದಿನದಂದು ಮಧ್ಯಾಹ್ನ 1:30 ಗಂಟೆಯೊಳಗಾಗಿ ಮೂಲ ದಾಖಲೆಗಳೊಂದಿಗೆ ಹಾಜರಾಗದೇ ಇದ್ದಲ್ಲಿ ಯಾವುದೇ ಮುನ್ಸೂಚನೇ ನೀಡದೇ ನೇಮಕಾತಿಯಿಂದ ಕೈ ಬಿಡಲಾಗುವುದು.

| ಕ್ರ. ಸಂ | ಹುದ್ದೆಯ ಹೆಸರು | ದಾಖಲಾತಿ ಪರಿಶೀಲನಾ ದಿನಾಂಕ | ಸ್ಥಳ | ಸಮಯ |
|---|---|---|---|---|
| 1 | ಅಡುಗೆ ಸಹಾಯಕ | 21-06-2017 | ಸರ್ಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ ಕಾಲೇಜು ಕಾರವಾರ (ಜಿಲ್ಲಾ ರಂಗಮಂದಿರದ ಬಲಭಾಗ) | ಬೆಳಗ್ಗೆ 10:00 ಗಂಟೆಗೆ |
| 2 | ಕಾವಲುಗಾರ | 24-06-2017 | ಸರ್ಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ ಕಾಲೇಜು ಕಾರವಾರ (ಜಿಲ್ಲಾ ರಂಗಮಂದಿರದ ಬಲಭಾಗ) | ಬೆಳಗ್ಗೆ 10:00 ಗಂಟೆಗೆ |

ಪರಿಶೀಲನಾ ಸಮಯದಲ್ಲಿ ಅಭ್ಯರ್ಥಿಗಳು ಹಾಜರುಪಡಿಸಬೇಕಾದ ಮೂಲ ದಾಖಲೆಗಳು ಈ ಕೆಳಗಿನಂತಿವೆ.

1) ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು
2) ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿ (ನೇಮಕಾತಿ ಅಧೀಸೂಚನೆಯಲ್ಲಿ ತಿಳಿಸಿರುವಂತೆ)
3) ವಯಸ್ಸಿನ ಬಗ್ಗೆ ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಅಥವಾ ಜನನ ಪ್ರಮಾಣ ಪತ್ರ ಅಥವಾ ಎಸ್.ಎಸ್.ಎಲ್.ಸಿ ಮೂಲ ಟಿಸಿ ಪ್ರಮಾಣ ಪತ್ರ ಪರಿಶೀಲನೆಗಾಗಿ ಹಾಜರಪಡಿಸಬೇಕು.
4) ಜಾತಿಯ ಬಗ್ಗೆ ಮಿಸಲಾತಿ ಕೋರಿರುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಗಧಿತ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ ಹಾಜರಿಪಡಿಸುವುದು.
5) ಗ್ರಾಮೀಣ ಮೀಸಲಾತಿ ಹಾಗೂ ಕನ್ನಡ ಮಾಧ್ಯಮ ಮೀಸಲಾತಿ ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ
6) ಅಂಗವಿಕಲ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಜಿಲ್ಲಾ ವೈಧ್ಯಾಧಿಕಾರಿ ಮಂಡಳಿಯಿಂದ ಪಡೆದ ಮೂಲ ಪ್ರಮಾಣ ಪತ್ರಗಳನ್ನು ಹಾಜರುಪಡಿಸಬೇಕು.
7) ಮಾಜಿ ಸೈನಿಕರ ಮೀಸಲಾತಿ ಬಯಸಿದ್ದಲ್ಲಿ ಅಭ್ಯರ್ಥಿಗಳು ಸೈನಿಕ ಸೇವೆಯಲ್ಲಿ ಬಿಡುಗಡೆಯಾದ/ ಮುಕ್ತಿಹೊಂದಿದ ಬಗೆಗಿನ ಪ್ರಮಾಣ ಪತ್ರ ಹಾಜರುಪಡಿಸಬೇಕು.
8) ಯೋಜನಾ ನಿರಾಶ್ರೀತ ಮೀಸಲಾತಿ ಬಯಸಿದಲ್ಲಿ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲಕ ಪ್ರಮಾಣ ಪತ್ರ ಹಾಜರುಪಡಿಸಬೇಕು.
9) ಸರಕಾರಿ ಸೇವೆಯಲ್ಲಿ ಇರುವವರು (ರಾಜ್ಯ.ಕೇಂದ್ರ) ಸಂಬಂಧಪಟ್ಟ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಪಡೆದ (N.O.C) ಮೂಲ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.
10) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಬಗ್ಗೆ acknowdegement ಹಾಗೂ ಹಣ ತುಂಬಿದ ಬಗ್ಗೆ ಬ್ಯಾಂಕ್/ಆನ್‌ಲೈನ್‌ದಿಂದ ಪಡೆದ ಮೂಲ ಚಲನ ಪ್ರತಿಯನ್ನು ಹಾಜರಪಡಿಸಬೇಕು.
11) ಮೀಸಲಾತಿಗೆ ಸಂಬಂಧಿಸಿದಂತೆ ಅರ್ಜಿ ಹಾಕುವ ಸಮಯದಲ್ಲಿ ಅಪ್‌ಲೋಡ್ ಮಾಡಿರುವ ಇತರೆ ದಾಖಲೆಗಳು.
12) ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತವಾಗಿ ದಿನಾಂಕ:20-06-2017 ರೊಳಗೆ ಮಾನ್ಯ ಜಿಲ್ಲಾಧಿಕಾರಿಗಳು/ಅಧ್ಯಕ್ಷರು ಆಯ್ಕೆ ಸಮಿತಿ ರವರಿಗೆ ಸಲ್ಲಿಸುವುದು ಆನಂತರ ಬಂದ ಯಾವುದೇ ಆಕ್ಷೇಪಣೆ/ದೂರು ಪರಿಗಣಿಸಲಾಗುವುದಿಲ್ಲಾ
13) ಅಡುಗೆ ತಯಾರಿಕೆ ಬಗ್ಗೆ 3 ವರ್ಷ ಅನುಭವ ಇರುವ ಬಗ್ಗೆ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿದಂತೆ ಸಂಬಂಧಪಟ್ಟ ಸಂಸ್ಥೆಯಿಂದ ಪಡೆದಿರುವ ದೃಢೀಕರಣ ಪತ್ರ.

ವಿಶೇಷ ಸೂಚನೆ:ಅಭ್ಯರ್ಥಿಗಳು ಅಧಿಸೂಚನೆಯ ಕೊನೆಯ ದಿನಾಂಕ:30-11-2016 ರ ಪೂರ್ವದಲ್ಲಿ ಪಡೆದ ಈ ಮೇಲಿನ ಎಲ್ಲ ಮೂಲ ದಾಖಲೆಗಳನ್ನು ಹಾಗೂ ಅವುಗಳ ಒಂದು ದೃಢೀಕೃತ ಪ್ರತಿಯನ್ನು ಪರಿಶೀಲನಾ ಸಮಯದಲ್ಲಿ ತಪ್ಪದೇ ಹಾಜರಪಡಿಸಬೇಕು.

ಉಪನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ ಹಾಗೂ
ಸದಸ್ಯಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆಯ ಗ್ರೂಪ್ ಡಿ
ನೇಮಕಾತಿ ಸಮಿತಿ ಉತ್ತರ ಕನ್ನಡ ಜಿಲ್ಲೆ ಕಾರವಾರ